**ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:22-03-2021 ರ ನಡವಳಿಗಳು**

**ವಿಷಯದ ಸಂಖ್ಯೆ: 656/2020-21**

**ಪ್ರಸ್ತಾವನೆ :**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, Improvements to Vibhutipura Lake ಕಾಮಗಾರಿಗೆ ಕಾರ್ಯಪಾಲಕ ಅಭಿಯಂತರರು-1 (ಕೆರೆಗಳು) ರವರು ಇ-ಪ್ರೊಕ್ಯೂರ್‌ಮೆಂಟ್ ವಿಧಾನದ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿರುತ್ತಾರೆ. ಟೆಂಡರ್‌ನ ಮೊದಲನೇ ಐದು ಕರೆಗಳಲ್ಲಿ ಯಾವುದೇ ಬಿಡ್‌ದಾರರು ಭಾಗವಹಿಸಿರುವುದಿಲ್ಲ. ಆರನೇ ಕರೆಯಲ್ಲಿ ಗುತ್ತಿಗೆದಾರರಾದ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರಿಂದ 01 (ಒಂದು) ಟೆಂಡರ್ ಸ್ವೀಕೃತವಾಗಿದ್ದು, ಸದರಿಯವರು ತಾಂತ್ರಿಕ ಬಿಡ್‌ನಲ್ಲಿ ಸಿಂಧುವಾಗಿರುತ್ತಾರೆ. ಕಾರ್ಯಪಾಲಕ ಅಭಿಯಂತರರು-1, ಕೆರೆಗಳು ರವರು ಸದರಿ ಬಿಡ್‌ದಾರರ ಟೆಂಡರ್ ಅನ್ನು ಅನುಮೋದನೆಗಾಗಿ ಸಲ್ಲಿಸಿರುತ್ತಾರೆ.

ಪ್ರಸ್ತಾಪಿತ ಕಾಮಗಾರಿಗೆ, 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಯ ಆಧಾರದ ಮೇಲೆ ರೂ.400.00 ಲಕ್ಷಗಳ ಅಂದಾಜು ಪಟ್ಟಿಗೆ ಮುಖ್ಯ ಅಭಿಯಂತರರು (ಕೆರೆಗಳು) ರವರು ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಸದರಿ ಕಾಮಗಾರಿಯ ಟೆಂಡರ್‌ಗಿಟ್ಟ ಮೊಬಲಗು ರೂ.3,31,06,776.96 (ಜಿ.ಎಸ್.ಟಿ.ಹೊರತುಪಡಿಸಿ) ಗಳಾಗಿದ್ದು, ಗುತ್ತಿಗೆದಾರರಾದ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರು ಟೆಂಡರ್ ಮೊತ್ತ ರೂ.4,04,99,557.69 (ಜಿ.ಎಸ್.ಟಿ.ಹೊರತುಪಡಿಸಿ) ಗಳನ್ನು ನಮೂದಿಸಿದ್ದು, ಸದರಿ ಮೊತ್ತವನ್ನು ಪ್ರಸ್ತುತ ಚಾಲ್ತಿಯಲ್ಲಿರುವ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ.22.33 (+) ಹೆಚ್ಚು ದರಗಳನ್ನು ನಮೂದಿಸಿರುತ್ತಾರೆ.

ಸದರಿ ದರಗಳು ಹೆಚ್ಚೆಂದು ಕಂಡುಬಂದ ಹಿನ್ನಲೆಯಲ್ಲಿ, ಕಾರ್ಯಪಾಲಕ ಅಭಿಯಂತರರು-1, ಕೆರೆಗಳು ರವರು ದರ ಸಂಧಾನ ಮಾಡಲಾಗಿ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರು ಒಪ್ಪಿ, ಸಂಧಾನ ನಂತರ ನಮೂದಿಸಿರುವ ಟೆಂಡರ್ ಮೊತ್ತವಾದ ರೂ.3,97,28,132.00 (ಜಿ.ಎಸ್.ಟಿ.ಹೊರತುಪಡಿಸಿ) ಗಳನ್ನು, ಪ್ರಸ್ತುತ ಚಾಲ್ತಿಯಲ್ಲಿರುವ ದರಪಟ್ಟಿಗೆ ಹೋಲಿಸಿದಾಗ ಶೇಕಡ 20% (+) ಹೆಚ್ಚು ದರಗಳಾಗಿರುತ್ತದೆ.

ಸದರಿ ದರಗಳು ಸಹ ಹೆಚ್ಚೆಂದು ಕಂಡುಬಂದ ಮೇರೆಗೆ ಮುಖ್ಯ ಅಭಿಯಂತರರು (ಕೆರೆಗಳು) ರವರ ನಿರ್ದೇಶನದಂತೆ ಮರು ದರ ಸಂಧಾನ ಮಾಡಲಾಗಿ, ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರು ಒಪ್ಪಿರುವ ಸಂಧಾನ ನಂತರದ ಟೆಂಡರ್ ಮೊತ್ತವಾದ ರೂ.3,63,84,348.00/- (ಜಿ.ಎಸ್.ಟಿ.ಹೊರತುಪಡಿಸಿ) ಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ ದರಪಟ್ಟಿಗೆ ಹೋಲಿಸಿದಾಗ ಶೇಕಡ.9.90 (+) ಹೆಚ್ಚುವರಿ ದರಗಳಾಗಿರುತ್ತದೆ. ಅದರಂತೆ, ಸದರಿ ಟೆಂಡರ್ ಅನ್ನು ಅನುಮೋದಿಸಲು ಮುಖ್ಯ ಅಭಿಯಂತರರು, ಕೆರೆಗಳು ರವರು ಶಿಫಾರಸ್ಸು ಮಾಡಿರುತ್ತಾರೆ.

ಮೇಲ್ಕಂಡ ಅಂಶಗಳನ್ನು ಗಮನಿಸಲಾಗಿ, ಟೆಂಡರ್‌ನ ಒಟ್ಟು ಮೊತ್ತವು (ಟೆಂಡರ್ ಪ್ರೀಮಿಯಂ ಸೇರಿ) ರೂ.3,63,84,348.00/- (ಜಿ.ಎಸ್.ಟಿ.ಹೊರತುಪಡಿಸಿ) ಗಳಾಗಿದ್ದು, ಮಾನ್ಯ ಆಯುಕ್ತರವರ ಅಧಿಕಾರ ಪ್ರತ್ಯಾಯೋಜನೆ ನಡವಳಿ ಆದೇಶದ ಸಂಖ್ಯೆ: ಬಿ12(1)/ಪಿ.ಆರ್/394/2019-20, ದಿನಾಂಕ:25.09.2019ರ ರೀತ್ಯಾ ಸದರಿ ಕಾಮಗಾರಿಯ ಟೆಂಡರ್ ಅಂಗೀಕರಿಸುವ ಪ್ರಾಧಿಕಾರವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಸಭೆಯ ವ್ಯಾಪ್ತಿಯಲ್ಲಿರುತ್ತದೆ.

ಈ ಹಿನ್ನಲೆಯಲ್ಲಿ ಸದರಿ ಕಾಮಗಾರಿಯ ಟೆಂಡರ್ ಗುತ್ತಿಗೆದಾರರಾದ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರು ಸಂಧಾನದ ನಂತರ ನಮೂದಿಸಿರುವ ಮೊತ್ತವಾದ ರೂ.3,63,84,348.00/- (ಜಿ.ಎಸ್.ಟಿ.ಹೊರತುಪಡಿಸಿ) (ರೂ.ಮೂರು ಕೋಟಿ ಅರವತ್ತಮೂರು ಲಕ್ಷದ ಎಂಭತ್ತನಾಲ್ಕು ಸಾವಿರದ ಮೂನ್ನೂರ ನಲವತ್ತೆಂಟು ಮಾತ್ರ) ಗಳನ್ನು ಪ್ರಸ್ತುತ ಚಾಲ್ತಿಯಲ್ಲಿರುವ 2018-19ನೇ ಸಾಲಿನ ಲೋಕೋಪಯೋಗಿ ಇಲಾಖೆ ದರಪಟ್ಟಿ & 2018-19 ನೇ ಸಾಲಿನ ಸಣ್ಣ ನೀರಾವರಿ ಇಲಾಖೆಯ ದರಪಟ್ಟಿಗೆ ಹೋಲಿಸಿದಾಗ ಶೇಕಡ.9.90 (+) ರಷ್ಟು ಹೆಚ್ಚುವರಿಯಾಗಿರುತ್ತದೆ.

ಮೇಲ್ಕಂಡ ವರದಿಯ ಹಿನ್ನಲೆಯಲ್ಲಿ, ಈ ಕೆಳಕಂಡ ಅಂಶಗಳಿಗೆ ಅನುಮೋದನೆ ನೀಡುವ ಸಂಬಂಧ ತೋಟಗಾರಿಕೆ ಸ್ಥಾಯಿ ಸಮಿತಿ ಹಾಗೂ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಸೂಕ್ತ ತೀರ್ಮಾನಕ್ಕಾಗಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-01-2021 ರ ಟಿಪ್ಪಣಿ.

1. ಪಾಲಿಕೆಯ ಅನುದಾನದಡಿ Improvements to Vibhutipura Lake ಕಾಮಗಾರಿಯ ಅಂದಾಜು ಮೊತ್ತ ರೂ.400.00 ಲಕ್ಷಗಳಿಗೆ ಆಡಳಿತಾತ್ಮಕ ಅನುಮೋದನೆ.
2. ಆಡಳಿತಾತ್ಮಕ ಅನುಮೋದನೆಯನ್ನು ನಿರೀಕ್ಷಿಸಿ, ಟೆಂಡರ್ ಪ್ರಕ್ರಿಯೆ ಕೈಗೊಂಡಿರುವ ಕ್ರಮವನ್ನು ಸ್ಥಿರೀಕರಿಸಲು ಅನುಮೋದನೆ.
3. ಸದರಿ ಕಾಮಗಾರಿಯ ಟೆಂಡರ್‌ನಲ್ಲಿ ಭಾಗವಹಿಸಿ ತಾಂತ್ರಿಕವಾಗಿ ಅರ್ಹರಾಗಿರುವ ಬಿಡ್ದುದಾರರಾದ ಶ್ರೀ.ದಾಮೋದರ್ ಮಂಜುನಾಥ್ (ಕೆ.ದಾಮೋದರ್ & ಕೋ) ರವರು ದರ ಸಂಧಾನದ ನಂತರ ನಮೂದಿಸಿರುವ ಮೊತ್ತವಾದ ರೂ.3,63,84,348.00/- (ಜಿ.ಎಸ್.ಟಿ.ಹೊರತುಪಡಿಸಿ) ಗಳ ಟೆಂಡರ್‌ಗೆ (ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಬಂದಂತಹ ಶೇ.9.90 (+) ರಷ್ಟು ಹೆಚ್ಚುವರಿ) ಅನುಮೋದನೆ.

**<u>ತೀರ್ಮಾನ :</u>** **ವಿಶೇಷ ಆಯುಕ್ತರು (ಯೋಜನೆ) ರವರ ದಿನಾಂಕ:21-01-2021 ರ ಟಿಪ್ಪಣಿಯನ್ನು ಒಪ್ಪಿದೆ.**

(ಗೌರವ ಗುಪ್ತ)
ಆಡಳಿತಗಾರರು